Abhay S. Oka
Chief Justice
High Court of Karnataka

High Court of Karnataka
Bengaluru - 560 001

©: Off : 080-22954601
22954602

# APPEAL TO THE STAFF MEMBERS TO GET COVAXIN/ COVISHIELD VACCINATION

COVID-19 pandemic is spreading rapidly in Karnataka. It is the duty of each one of us to ensure that, not only the transmission of COVID-19 is prevented but to get ourselves protected and people around us from getting infected. The vaccination is definitely one of the steps in the process of breaking the chain of transmission. From April 1, 2021, the Government of Karnataka has initiated a drive for free vaccination to all those who are above 45 years of age. It is our duty and responsibility to be a part of such a drive of vaccination by taking it as early as possible. That will provide a shield against Novel Corona Virus.

As the Courts are functioning normally, general public, litigants and advocates are regularly visiting the Court and offices. It is, therefore, necessary that all eligible staff members get themselves vaccinated. They come in direct contract with the Litigants and Advocates.

Hence, I appeal all the members of the staff who are above 45 years of age working in the High Court of Karnataka, Principal seat at Bengaluru and Benches at Dharwad and Kalaburagi as well as all the staff members of the District and Trial Judiciary in the State of Karnataka, to get vaccinated as early as possible and also take all possible precautionary measures to remain safe.

April 6, 2021

Sd/-
ABHAY SHREENIWAS OKA
Chief Justice

Abhay S. Oka
Chief Justice
High Court of Karnataka

High Court of Karnataka
Bengaluru - 560 001

✆ : Off : 080-22954601
22954602

## ಕೋವ್ಯಾಕ್ಸಿನ್/ಕೋವಿಶೀಲ್ಡ್ ಲಸಿಕೆ ಪಡೆದುಕೊಳ್ಳುವಂತೆ ಸಿಬ್ಬಂದಿಗಳಲ್ಲಿ ಮನವಿ

ಕೋವಿಡ್–19 ಸಾಂಕ್ರಾಮಿಕ ರೋಗವು ಕರ್ನಾಟಕದಲ್ಲಿ ತೀವ್ರವಾಗಿ ಹರಡುತ್ತಿದ್ದು, ಕೇವಲ ಕೋವಿಡ್–19 ಹರಡುವಿಕೆಯನ್ನು ತಡೆಗಟ್ಟುವುದಷ್ಟೇ ಮಾತ್ರವಲ್ಲದೆ ನಮ್ಮನ್ನು ಹಾಗೂ ನಮ್ಮ ಸುತ್ತಮುತ್ತಲಿನ ಜನರನ್ನು ಈ ಸೋಂಕಿನಿಂದ ರಕ್ಷಿಸುವುದು ಪ್ರತಿಯೊಬ್ಬರ ಕರ್ತವ್ಯ ಹಾಗೂ ಜವಾಬ್ದಾರಿಯಾಗಿರುತ್ತದೆ. ಸೋಂಕಿನ ಹರಡುವಿಕೆಯ ಸರಪಳಿಯನ್ನು ಮುರಿಯುವ ಪ್ರಕ್ರಿಯೆಯಲ್ಲಿ ಲಸಿಕೆಯನ್ನು ಪಡೆಯುವುದು ಒಂದು ಉತ್ತಮ ಹಂತವಾಗಿದ್ದು ದಿನಾಂಕ ಏಪ್ರಿಲ್ 1, 2021ರಿಂದ ಕರ್ನಾಟಕ ಸರ್ಕಾರವು 45 ವರ್ಷಕ್ಕಿಂತ ಮೇಲ್ಪಟ್ಟ ಎಲ್ಲಾ ಜನರಿಗೆ ಉಚಿತ ಲಸಿಕೆಯ ಆಂದೋಲನವನ್ನು ಪ್ರಾರಂಭಿಸಿದೆ. ನೋವೆಲ್ ಕರೋನಾ ವೈರಾಣುವಿನ ವಿರುದ್ಧ ರಕ್ಷಣೆ ನೀಡುವ ಇಂತಹ ಒಂದು ಆಂದೋಲನದಲ್ಲಿ ಭಾಗಿಯಾಗುವುದು ಮತ್ತು ಸಾಧ್ಯವಾದಷ್ಟು ಬೇಗ ಲಸಿಕೆಯನ್ನು ಪಡೆಯುವುದು ನಮ್ಮೆಲ್ಲರ ಕರ್ತವ್ಯ ಹಾಗೂ ಜವಾಬ್ದಾರಿಯಾಗಿರುತ್ತದೆ.

ನ್ಯಾಯಾಲಯಗಳು ಎಂದಿನಂತೆ ಕಾರ್ಯನಿರ್ವಹಿಸುತ್ತಿರುವುದರಿಂದ, ಸಾರ್ವಜನಿಕರು, ಕಕ್ಷಿದಾರರು ಹಾಗೂ ವಕೀಲರುಗಳು ನಿರಂತರವಾಗಿ ನ್ಯಾಯಾಲಯದ ಕಾರ್ಯಕಲಾಪದಲ್ಲಿ ಭಾಗವಹಿಸುತ್ತಿದ್ದು ಮತ್ತು ನ್ಯಾಯಾಲಯದ ಕಚೇರಿಗಳಿಗೆ ಭೇಟಿ ನೀಡುತ್ತಿರುತ್ತಾರೆ. ಆದ್ದರಿಂದ, ಎಲ್ಲಾ ಅರ್ಹ ಸಿಬ್ಬಂದಿ ವರ್ಗದವರು ಲಸಿಕೆಯನ್ನು ಪಡೆಯುವುದು ಅವಶ್ಯಕವಾಗಿರುತ್ತದೆ, ಏಕೆಂದರೆ ಸಿಬ್ಬಂದಿ ವರ್ಗದವರು ಕಕ್ಷಿದಾರರ ಹಾಗೂ ವಕೀಲರ ನೇರ ಸಂಪರ್ಕಕ್ಕೆ ಬರುತ್ತಾರೆ.

ಕರ್ನಾಟಕ ಉಚ್ಚ ನ್ಯಾಯಾಲಯದ ಪ್ರಧಾನ ಪೀಠ, ಬೆಂಗಳೂರು ಹಾಗೂ ಧಾರವಾಡ ಮತ್ತು ಕಲಬುರಗಿ ಪೀಠಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 45 ವರ್ಷಕ್ಕಿಂತ ಮೇಲ್ಪಟ್ಟ ಎಲ್ಲಾ ಸಿಬ್ಬಂದಿಗಳು ಮತ್ತು ಕರ್ನಾಟಕ ರಾಜ್ಯದ ಜಿಲ್ಲಾ ಮತ್ತು ತಾಲ್ಲೂಕಿನ ನ್ಯಾಯಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರು ಸಾಧ್ಯವಾದಷ್ಟು ಬೇಗ ಲಸಿಕೆಯನ್ನು ಪಡೆದುಕೊಂಡು ಸುರಕ್ಷಿತವಾಗಿರುವುದು ಹಾಗೂ ಎಲ್ಲಾ ಮುನ್ನೆಚ್ಚರಿಕಾ ಕ್ರಮಗಳನ್ನು ಪಾಲಿಸುವುದು ಅತ್ಯವಶ್ಯಕವಾಗಿರುತ್ತದೆ ಎಂದು ಈ ಮೂಲಕ ನಾನು ವಿನಂತಿಸಿಕೊಳ್ಳುತ್ತೇನೆ.

ಏಪ್ರಿಲ್ 6, 2021

ಸಹಿ/-
ಅಭಯ್ ಶ್ರೀನಿವಾಸ್ ಓಕ
ಮುಖ್ಯ ನ್ಯಾಯಮೂರ್ತಿಗಳು